2017 ಕ.ತೀ.ವ 663

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

# ಸೈಯ್ಯದ್ ಶಭೀರ್ ಹುಸೇನ್ –ವಿರುದ್ಧ– ಕರ್ನಾಟಕ ಸರ್ಕಾರ ಕಾರ್ಯದರ್ಶಿಯವರಿಂದ ಪ್ರತಿನಿಧಿತ ಕಾರ್ಮಿಕ ಇಲಾಖೆ ಮತ್ತು ಇತರರು*

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

ಅರ್ಜಿದಾರರನ್ನು ಶಿಕ್ಷಿಸಿ ಅವರಿಗೆ ಕನಿಷ್ಠ ವೇತನ ಶ್ರೇಣಿಗೆ ವೇತನವನ್ನು ಇಳಿಸಿದ ಎದುರುದಾರರ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.

ಅರ್ಜಿದಾರರು ವಿವಾದಿತ ಆದೇಶವನ್ನು ಎರಡನೇ ಎದುರುದಾರರಲ್ಲಿ ಮೇಲ್ಮನವಿ ಸಲ್ಲಿಸುವ ಮೂಲಕ ಪ್ರಶ್ನಿಸಿದ್ದು ಈ ಅಂಶವನ್ನು ಮುಚ್ಚಿಟ್ಟು ಸದರಿ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಕಾರಣದಿಂದ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ತಿರಸ್ಕರಿಸಿ ವಿಲೇಏಸಿದೆ.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

*1. (2008) 12 ಎಸ್‌ಸಿಸಿ 481, ಕೆ.ಡಿ. ಶರ್ಮ –ವಿರುದ್ಧ– ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ ಮತ್ತು ಇತರರು (ಉಲ್ಲೇ) 7*

*ರಿಟ್ ಅರ್ಜಿ ಸಂಖ್ಯೆ: 202241/2014 (ಎಸ್–ಡಿ.ಇ), ದಿನಾಂಕ: 7ನೇ ಡಿಸೆಂಬರ್, 2016.

2. *(2003) 9 ಎಸ್‌ಸಿಸಿ 401*
*ವಿಜಯ್ ಸ್ಯಾಲ್ ಮತ್ತು ಮತ್ತೊಬ್ಬರು –ವಿರುದ್ಧ–*
*ಪಂಜಾಬ್ ರಾಜ್ಯ ಮತ್ತು ಇತರರು (ಉಲ್ಲೇ) 8*
3. *(2010) 4 ಎಸ್‌ಸಿಸಿ 728,*
*ಓಸ್ವಾಲ್ ಫ್ಯಾಟ್ಸ್ ಅಂಡ್ ಆಯಿಲ್ಸ್ ಲಿ.*
*–ವಿರುದ್ಧ– ಹೆಚ್ಚುವರಿ ಆಯುಕ್ತರು (ಆಡಳಿತ),*
*ಬರೇಲಿ ವಿಭಾಗ, ಬರೇಲಿ ಮತ್ತು ಇತರರು (ಉಲ್ಲೇ) 9*
4. *(2010) 6 ಕೆಎಲ್‌ಜೆ 504 (ಡಿಬಿ)*
*ಎ.ಎಸ್. ಪರಮೇಶ್ವರಯ್ಯ ಮತ್ತು ಇತರರು –ವಿರುದ್ಧ–*
*ಕರ್ನಾಟಕ ರಾಜ್ಯ ಹಾಗೂ ಇತರರು (ಉಲ್ಲೇ) 10*

ಅರ್ಜಿದಾರರ ಪರ: ಶ್ರೀ ಪಿ. ವಿಲಾಸ್ ಕುಮಾರ್ ಮಾರ್ತಾಂಡ್ ರಾವ್, ವಕೀಲರು.
1ನೇ ಪ್ರತ್ಯರ್ಜಿದಾರರ ಪರ : ಶ್ರೀಮತಿ ಅರ್ಚನಾ ಪಿ. ತಿವಾರಿ, ಎಜಿಎ,
2 ಮತ್ತು 3ನೇ ಪ್ರತ್ಯರ್ಜಿದಾರರ ಪರ: ಶ್ರೀ ಎ.ಎಂ. ಪಾಟೀಲ್, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ವೇಣುಗೋಪಾಲ ಗೌಡ:**

ಅರ್ಜಿದಾರನು ಎಸ್.ಟಿ.ಯು. ನಲ್ಲಿ ಟ್ರಾಫಿಕ್ ಕಂಟ್ರೋಲರ್ ಆಗಿದ್ದು, ಅವರನ್ನು ಕನಿಷ್ಠ ವೇತನ ಶ್ರೇಣಿಗೆ ಇಳಿಸಿ, ಅಮಾನತು ಅವಧಿಯನ್ನು ಅಮಾನತೆಂದೇ ಪರಿಗಣಿಸಿ ದಂಡನೆ ವಿಧಿಸಿ, 23.07.2013ರಂದು ಹೊರಡಿಸಿದ ದಂಡನೀಯ ಆದೇಶ (ಅನುಬಂಧ – ಬಿ)ದ ವಿರುದ್ಧ ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾನೆ.

2. ಅರ್ಜಿದಾರನು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 02.02.1975ರಂದು ನಿರ್ವಾಹಕನಾಗಿ ನೇಮಕಗೊಂಡಿರುತ್ತಾನೆ. ಎನ್‌ಇಕೆಆರ್‌ಟಿಸಿಯು ಸ್ಥಾಪನೆಯಾದ ಮೇಲೆ ಅರ್ಜಿದಾರನು ಇದರ ಉದ್ಯೋಗಿಗಳಾಗಿರುತ್ತಾನೆ.

ಅನುಬಂಧ–ಎ ಮೇರೆಗೆ 21.07.2012ನೇ ದಿನಾಂಕದ ಆರೋಪಪಟ್ಟಿಯನ್ನು ಜಾರಿ ಮಾಡಲಾಗಿರುತ್ತದೆ. ಸಲ್ಲಿಸಲಾದ ಉತ್ತರವನ್ನು ಒಪ್ಪಿಕೊಳ್ಳಲಾಗುವುದಿಲ್ಲ ವೆಂಬುದು ಕಂಡು ಬಂದಿರುತ್ತದೆ ಹಾಗೂ ವಿಚಾರಣಾಧಿಕಾರಿಯನ್ನು ಶಿಸ್ತು ವಿಚಾರಣೆ ನಡೆಸಲು 31.07.2012ರಂದು ನೇಮಕ ಮಾಡಲಾಗಿರುತ್ತದೆ. ಅರ್ಜಿದಾರನ ಆರೋಪಿತ ದುರ್ನಡತೆಯ ತಪ್ಪಿತಸ್ಥವೆಂದು 27.08.2012ರಂದು ಶಿಸ್ತುಬದ್ಧ ವಿಚಾರಣೆಯನ್ನು ನಡೆಸಿ ವರದಿಯನ್ನು ಸಲ್ಲಿಸಿದ್ದು, ಅನುಬಂಧದ ಮೇರೆಗಿನ ದಂಡನೀಯ ಆದೇಶವನ್ನು ಹೊರಡಿಸಲಾಗಿರುತ್ತದೆ. ಈ ಆದೇಶವನ್ನು ನಿರಾಕರಿಸಿ, ಈ ಅರ್ಜಿಯನ್ನು 18.02.2014ರಂದು ಸಲ್ಲಿಸಲಾಗಿರುತ್ತದೆ.

3. ಅನುಬಂಧ–ಬಿ ಯಲ್ಲಿರುವಂತೆ ಆದೇಶದ ಮೇರೆಗೆ ವಿಧಿಸಿದ ದಂಡನೆಯನ್ನು ಪ್ರಶ್ನಿಸಿ, ಅರ್ಜಿದಾರನು, ಪ್ರತ್ಯರ್ಜಿದಾರ ಸಂ.2ರ ಮುಂದೆ ಅಪೀಲನ್ನು ಸಲ್ಲಿಸಲಾಗಿರುತ್ತದೆ. ಅಪೀಲನ್ನು ಪರಿಗಣಿಸಿದ ಮೇಲೆ 25.01.2014ರಂದು ನಿರಾಕರಿಸಲಾಗಿರುತ್ತದೆ. 28.01.2014ರಂದು ಸದರಿ ಆದೇಶದ ಪ್ರತಿಯನ್ನು ಅರ್ಜಿದಾರನು ಸ್ವೀಕರಿಸಿದ್ದಾಗ್ಯೂ, ಈ ಅರ್ಜಿಯಲ್ಲಿ ಇದಕ್ಕೆ ಅಂದರೆ ಅಪೀಲನ್ನು ಸಲ್ಲಿಸುವ ವಾಸ್ತವಾಂಶ ಹಾಗೂ ತೀರ್ಮಾನಕ್ಕೆ ಕೇವಲ ಒಂದೇ ಒಂದು ಮಾತನ್ನು ಪ್ರಸ್ತಾಪಿಸಿರುವುದಿಲ್ಲ.

4. ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಎ.ಎಂ. ಪಾಟೀಲ್ ರವರು, ಅನುಬಂಧ – ಬಿ ಯಲ್ಲಿರುವಂತೆ ದಂಡನೆಯ ಆದೇಶವನ್ನು ಅಪೀಲಿನಲ್ಲಿ ಹೊರಡಿಸಿರುವ ಆದೇಶದೊಂದಿಗೆ ವಿಲೀನಗೊಳಿಸಿದ್ದು, ಅಪೀಲು ಪ್ರಾಧಿಕಾರದ ಆದೇಶವನ್ನು ಪ್ರಶ್ನಿಸಿರುವುದಿಲ್ಲ ಹಾಗೂ ಮುಖ್ಯವಾದ ವಾಸ್ತವಾಂಶವನ್ನು ಮರೆಮಾಚಿದ್ದು, ಅರ್ಜಿದಾರರು ಶುದ್ಧ ಹಸ್ತರಾಗಿ ನ್ಯಾಯಾಲಯಕ್ಕೆ ಬಂದಿರುವುದಿಲ್ಲ, ಹಾಗಾಗಿ ಅರ್ಜಿಯನ್ನು ಹೆಚ್ಚಿನ ವೆಚ್ಚಗಳನ್ನು ವಿಧಿಸಿ ಆರಂಭದಲ್ಲಿಯೇ ತಿರಸ್ಕರಿಸಲಾಗುವುದು ಸೂಕ್ತವಾದುದೆಂದು ವಾದಿಸಿರುತ್ತಾರೆ.

5. ಮಾನ್ಯ ನ್ಯಾಯವಾದಿಗಳಾದ ಶ್ರೀ ಪಿ. ವಿಲಾಸ್ ಕುಮಾರ್ ರವರು, ಆರಂಭದಲ್ಲಿ, ಅಪೀಲಿನ ಕ್ರಮೋಪಾಯವು ಫಲಪ್ರದವಾಗಿಲ್ಲದಿರುವುದರಿಂದ,

ಅರ್ಜಿದಾರರು ಪರಿಹಾರವನ್ನು ಪಡೆಯಲಾಗುವುದಿಲ್ಲವೆಂದು ವಾದಿಸಿರುತ್ತಾರೆ. ಆದಾಗ್ಯೂ, ಕೇವಲ ಸ್ವಲ್ಪ ಹೊತ್ತಿನ ಬಳಿಕ, ಮಾನ್ಯ ವಕೀಲರು, ತಮ್ಮ ನಿಲುವನ್ನು ಬದಲಿಸಿ, ತಮ್ಮ ಕಡತದಿಂದ, ಅಪೀಲು ಪ್ರಾಧಿಕಾರವು ಹೊರಡಿಸಿದ 25.01.2014ರಂದಿನ ಆದೇಶದ ಪ್ರತಿಯನ್ನು ತೆಗೆದು, ಈ ಅಪೀಲು ಶಾಸನಾತ್ಮಕ ಅಪೀಲಾಗಿಲ್ಲದಿರುವುದರಿಂದ ಪ್ರತ್ಯರ್ಜಿದಾರ ಸಂ.2 ಹೊರಡಿಸಿದ ಆದೇಶವನ್ನು ಅಲಕ್ಷಿಸಿ, ಸದರಿ ಪ್ರಕರಣವನ್ನು ನಿರ್ಣಯಿಸಲು ಈ ನ್ಯಾಯಾಲಯಕ್ಕೆ ಯಾವುದೇ ನಿಷೇಧವಿರುವುದಿಲ್ಲವೆಂದು ವಾದಿಸಿ, ಸಲ್ಲಿಸಿರುತ್ತಾರೆ.

6. ಅಪೀಲು ಪ್ರಾಧಿಕಾರದ ಆದೇಶದ ಪ್ರತಿಯನ್ನು ನಾನು ಪರಿಶೀಲಿಸಿರುತ್ತೇನೆ. ಪರಿಗಣನೆಯನ್ನು ತಿರಸ್ಕರಿಸಲಾಗಿರುವುದರ ಮೇಲೆ ಅರ್ಜಿದಾರರು ಅಪೀಲನ್ನು ಸಲ್ಲಿಸಿರುವುದರಿಂದ, ಅಪೀಲು ಪ್ರಾಧಿಕಾರವು ಹೊರಡಿಸಿದ ಆದೇಶದೊಂದಿಗೆ ಅಲ್ಲಿ ಅನುಬಂಧ–ಬಿಯಲ್ಲಿರುವಂಥ ಆದೇಶ ಮಾತ್ರವಿರುತ್ತದೆ. ಹಾಗಾಗಿ, ಆನುಬಂಧ–ಬಿ ಯಲ್ಲಿರುವಂತೆ ದಂಡನೀಯ ಆದೇಶವನ್ನು ನಿರಾಕರಿಸಲು ಅಂದರೆ, ಅಪೀಲು ಪ್ರಾಧಿಕಾರವು ಹೊರಡಿಸಿದ ಆದೇಶವನ್ನು ಪ್ರಶ್ನಿಸದಿರುವಲ್ಲಿ ಅರ್ಜಿದಾರರಿಗೆ ಇದು ಮುಕ್ತವಾಗಿರುವುದಿಲ್ಲವೆಂದು ಶ್ರೀ ಎ.ಎಂ. ಪಾಟೀಲ್‌ರವರು ಮಾಡಿದ ನಿವೇದನೆಯಲ್ಲಿ ಹುರುಳಿರುತ್ತದೆ.

—

7. ***ಕೆ.ಡಿ. ಶರ್ಮ –ವಿರುದ್ಧ– ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್ ಮತ್ತು ಇತರರು*** [1], ಪ್ರಕರಣದಲ್ಲಿ, ಸಂವಿಧಾನದ 226ನೇ ಅನುಚ್ಛೇದದಡಿಯಲ್ಲಿ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಅಸಾಮಾನ್ಯವಾದುದು, ನ್ಯಾಯ ಸಮ್ಮತವಾದದು ಹಾಗೂ ವಿವೇಚನಾಯುತವಾದುದೆಂದು ಅಭಿಪ್ರಾಯಪಟ್ಟಿರುತ್ತದೆ. ನ್ಯಾಯಾಲಯಕ್ಕೆ ಬರುವ ಪಕ್ಷಕಾರನು ಶುದ್ಧ ಹಸ್ತದೊಂದಿಗೆ ಬರಬೇಕು ಹಾಗೂ ಯಾವುದನ್ನು ಬಚ್ಚಿಡದೆ ಅಥವಾ ಅಡಗಿಸಿಡದೆ ನ್ಯಾಯಾಲಯದ ಮುಂದೆ ಎಲ್ಲಾ ವಾಸ್ತವಾಂಶಗಳನ್ನು ತಂದು, ಪರಿಹಾರವನ್ನು ಕೋರಬೇಕೆಂದು ಅಭಿಪ್ರಾಯ ಪಟ್ಟಿರುತ್ತದೆ. ಮುಂದುವರೆದು, ಸೂಕ್ತ ಹಾಗೂ ಮುಖ್ಯವಾದ ವಾಸ್ತವಾಂಶಗಳನ್ನು

1. (2008) 12 ಎಸ್‌ಸಿಸಿ 481

ಯಥಾವತ್ತಾಗಿ ಬಹಿರಂಗಪಡಿಸದಿದ್ದಲ್ಲಿ ಅಥವಾ ಅರ್ಜಿದಾರರು ನ್ಯಾಯಾಲಯವನ್ನು ತಪ್ಪುದಾರಿಗೆಳೆಯುವ ತಪ್ಪಿತಸ್ಥನಾಗಿದ್ದರೆ, ಆತನ ಪ್ರಕರಣವನ್ನು ಪ್ರಕರಣದ ಗುಣಾರ್ಹತೆಗಳನ್ನು ಪರಿಗಣಿಸದೆ ಆರಂಭದಲ್ಲಿಯೇ ವಜಾಗೊಳಿಸಲು ತಕ್ಕುದಾಗಿರುತ್ತದೆ.

8. ***ವಿಜಯ್ ಸ್ಯಾಲ್ ಮತ್ತು –ಮತ್ತೊಬ್ಬರು– ವಿರುದ್ಧ – ಪಂಜಾಬ್ ರಾಜ್ಯ ಮತ್ತು ಇತರರು***[2], ಪ್ರಕರಣದಲ್ಲಿ, ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> *"24. ನ್ಯಾಯಾಲಯಗಳಲ್ಲಿನ ನಡಾವಳಿಗಳ ಪಾವಿತ್ರ್ಯತೆ ಹಾಗೂ ಪರಿಶುದ್ಧತೆಯನ್ನು ಸಮರ್ಥವಾಗಿ, ನಿರ್ವಹಿಸುವ ದೃಷ್ಟಿಯಿಂದ, ಪಕ್ಷಕಾರರು, ನ್ಯಾಯಾಲಯವನ್ನು, ಸತ್ಯ ಹಾಗೂ ನ್ಯಾಯಗಳನ್ನು ಪರಿಶುದ್ಧತೆಯಿಂದ ಅನುಸರಿಸುವ ಸ್ಥಳವೆಂದು ಪರಿಗಣಿಸಿರುವಾಗ, ತಪ್ಪನ್ನು ಎಸಗಬಾರದು ಅಥವಾ ತಿಳಿದೂ ತಿಳಿದು, ನಿಖರತೆ ಇಲ್ಲದೆ ವಿವರಪಟ್ಟಿಗಳು ಅಥವಾ ತಪ್ಪಾದ ನಿರೂಪಣೆಗಳನ್ನು ಮಾಡಬಾರದು ಮತ್ತು / ಅಥವಾ ನ್ಯಾಯಾಲಯದ ಕಡೆಯಿಂದ ಕೆಲವು ಅನುಕೂಲ ಅಥವಾ ಸೌಲಭ್ಯಗಳನ್ನು ಪಡೆಯಲು ವಾಸ್ತವಿಕಾಂಶಗಳನ್ನು ಮುಚ್ಚಿಡಬಾರದು. ಯಾರೇ ಪಕ್ಷಕಾರನು, ಇಂಥ ಸ್ಥಳವನ್ನು, ತಪ್ಪಾದ ನಿರೂಪಣೆ ಮಾಡಿ ಮಲೀನಗೊಳಿಸಲು ಪ್ರಯತ್ನಿಸಿದಲ್ಲಿ ಹಾಗೂ ಮುಖ್ಯವಾದ ವಾಸ್ತವಾಂಶಗಳನ್ನು ಬಚ್ಚಿಟ್ಟಲ್ಲಿ ಅದಕ್ಕೆ ತಕ್ಕ ಬೆಲೆಯನ್ನು ತೆರಲೇ ಬೇಕಾಗುತ್ತದೆ. ಅಂಥ ವ್ಯಕ್ತಿಯು, ತನ್ನ ಮನಸೋ ಇಚ್ಛೆ ನಡೆದುಕೊಂಡಿದ್ದಕ್ಕೆ ಸಂಬಂಧಿಸಿದಂತೆ ಅದಕ್ಕೆ ತಕ್ಕ ಪರಿಣಾಮಗಳನ್ನು ಎದುರಿಸಲು ಸಿದ್ಧನಾಗಿರಬೇಕಾಗಿರುತ್ತದೆ. ಅಂಥ ವಿಷಯಗಳೊಂದಿಗೆ ವ್ಯವಹರಿಸುವಲ್ಲಿ ನ್ಯಾಯಾಲಯಗಳು ಅವುಗಳನ್ನು ಸರಳವಾಗಿ*

2. (2003) 9 ಎಸ್‌ಸಿಸಿ 401

*ಅಥವಾ ಉದಾರವಾಗಿ ಅಥವಾ ವಿಶಾಲವಾಗಿ ವರ್ತಿಸಿದರೆ, ಅಂಥವರಿಗೆ ತಕ್ಕ ಪಾಠ ಕಲಿಸುವುದಕ್ಕೆ ಬದಲಾಗಿ ಅದು ತಪ್ಪುಗಳಿಗೆ ದಾರಿ ಮಾಡಿಕೊಟ್ಟಂಥಾಗುತ್ತದೆ ಅಥವಾ ವಿಷಯವನ್ನು ಹಗುರವಾಗಿ ಪರಿಗಣಿಸಿದಂತಾಗುತ್ತದೆ. ಹಾಗಾಗಿ, ನ್ಯಾಯ ನಿರ್ವಹಣೆಯಲ್ಲಿ ನಿರೀಕ್ಷಿತ ಪರಿಶುದ್ಧತೆ ಹಾಗೂ ನಿಷ್ಠೆಯನ್ನು ಖಚಿತಪಡಿಸಿಕೊಳ್ಳಲು ಅಂಥ ವಿಷಯುಗಳೊಂದಿಗೆ ಗಂಭೀರವಾದ ನಿರ್ಧಾರವನ್ನು ತಳೆಯುವುದು ತುಂಬಾ ಅವಶ್ಯಕವಾಗಿರುತ್ತದೆ".*

9. ಹಿಂದಿನ ತೀರ್ಪನ್ನು ಗಮನಿಸಿದ ತರುವಾಯ ***ಕಿಸ್ವಾಲ್ ಫ್ಯಾಟ್ಸ್ ಹಾಗೂ ಆಯಿಲ್ಸ್ ಲಿ. –ವಿರುದ್ಧ– ಹೆಚ್ಚುವರಿ ಆಯುಕ್ತರು (ಆಡಳಿತ), ಬರೇಲಿ ವಿಭಾಗ, ಬರೇಲಿ ಮತ್ತು ಇತರರು***[3], ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

*"20. ಪರಿಹಾರ ನೀಡಿಕೆ, ನ್ಯಾಯ ಸಮ್ಮತತೆ ಅಥವಾ ಅನ್ಯಥಾ ವಿಚಾರಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಬಂದಂಥ ವ್ಯಕ್ತಿಯ ಪ್ರಕರಣದಲ್ಲಿ ಪ್ರಸ್ತಾಪಿಸಲಾದ ವಿವಾದಾಂಶಗಳ ನ್ಯಾಯ ನಿರ್ಣಯದ ಮೇಲೆ ಭರಿಸುವಂಥ ಪ್ರಮುಖವಾದ/ ಮುಖ್ಯವಾದ ಎಲ್ಲಾ ವಾಸ್ತವಾಂಶಗಳನ್ನು ಯಥಾವತ್ತಾಗಿ ಬಹಿರಂಗಗೊಳಿಸಲು ಏಕೈಕ ಹೊಣೆಗಾರಿಕೆಂಯಾಗಿರುತ್ತದೆಂಬುದು ಇತ್ಯರ್ಥಗೊಂಡ ಕಾನೂನಾಗಿರುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಈತ, ನ್ಯಾಯಾಲಯಕ್ಕೆ ತಾನು ತಿಳಿಸಿರುವ ಅಥವಾ ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ನಿರೀಕ್ಷಿತ ಮಟ್ಟದಲ್ಲಿ ಜಾಗರೂಕತೆಯಿಂದ ಕಾರ್ಯ ನಿರ್ವಹಿಸುವಾಗ ತಿಳಿದಿರಬಹುದಾದ ವಾಸ್ತವಾಂಶವನ್ನು ಬಚ್ಚಿಡದೆ ಎಲ್ಲಾ ವಾಸ್ತವಾಂಶಗಳನ್ನು ಹೊರಗೆಡುವುದು ಹಾಗೂ ಬಯಲಿಗೆಳೆಯುವುದು ಈತನ ಕರ್ತವ್ಯವಾಗಿರುತ್ತದೆ. ಈತ*

3. (2010) 4 ಎಸ್‌ಸಿಸಿ 728

*ಮುಖ್ಯವಾದ ವಾಸ್ತವಾಂಶಗಳನ್ನು ಬಚ್ಚಿಟ್ಟಿರುವ ತಪ್ಪಿತಸ್ಥನೆಂದು ಕಂಡು ಬಂದಲ್ಲಿ ಅಥವಾ ನ್ಯಾಯವೆಂಬ ಪರಿಶುದ್ಧ ಕ್ಷೇತ್ರವನ್ನು ಮಲೀನಗೊಳಿಸಲು ಪ್ರಯತ್ನಿಸಿದಲ್ಲಿ, ನ್ಯಾಯಾಲಯವು ಅಂಥ ವ್ಯಕ್ತಿಗೆ ಪರಿಹಾರವನ್ನು ನಿರಾಕರಿಸುವ ಹಕ್ಕನ್ನು ಹೊಂದಿರುವುದು ಮಾತ್ರವಲ್ಲದೆ, ಹಾಗೆ ಮಾಡುವುದು ಅವರ ಕರ್ತವ್ಯವೂ ಆಗಿರುತ್ತದೆ".*

10. ***ಎ.ಎಸ್. ಪರಮೇಶ್ವರಯ್ಯ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ ಹಾಗೂ ಇತರರು***[4], ಪ್ರಕರಣದಲ್ಲಿ, ರಿಟ್ ಅರ್ಜಿದಾರರು/ಅಪೀಲುದಾರರು ಮುಖ್ಯವಾದ ಮಾಹಿತಿಯನ್ನು ಹಾಗೂ ದಾಖಲೆಗಳನ್ನು ಮುಚ್ಚಿಟ್ಟಿರುತ್ತಾರೆಯೇ? ಎಂಬ ಅಂಶವನ್ನು ಪರಿಗಣಿಸಲಾಗಿರುತ್ತದೆ ಹಾಗೂ ಈ ಅಂಶಕ್ಕೆ ಉತ್ತರಿಸುವಾಗ, ಇದು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ.

*"8. . . . . .ಸಂವಿಧಾನದ 226/227ನೇ ಅನುಚ್ಛೇದಗಳಡಿಯಲ್ಲಿ ನ್ಯಾಯಾಲಯಕ್ಕೆ ಬಂದಂಥ ವ್ಯಕ್ತಿಯು, ಮುಕ್ತವಾಗಿರಬೇಕು ಹಾಗೂ ವಾಸ್ತವಾಂಶಗಳನ್ನು ಸಂಪೂರ್ಣವಾಗಿ ಬಚ್ಚಿಡಬೇಕು. ಪ್ರಶ್ನೆಗಳನ್ನು ಹೊಂದಿರುವಂಥ, ವಾಸ್ತವಾಂಶದ ಮಾಹಿತಿ ಅಥವಾ ಮುಖ್ಯವಾದ ದಸ್ತಾವೇಜುಗಳನ್ನು ನ್ಯಾಯಾಲಯಕ್ಕೆ ತಲುಪಿಸದಿರುವ ಪ್ರಯತ್ನಗಳೇನಾದರೂ ತಡೆದಲ್ಲಿ, ರಿಟ್ ಅರ್ಜಿಯು ವಜಾಗೊಳ್ಳಲು ಬದ್ಧವಾಗಿರತಕ್ಕದ್ದು. ಅಪೀಲುದಾರರಿಗೆ ಸ್ಪಷ್ಟವಾದ ಅರಿವಿರುವಂಥ ವಾಸ್ತವಾಂಶಗಳನ್ನು ಬಹಿರಂಗಪಡಿಸದಿರುವುದು, ಖಂಡಿತವಾಗಿ, ಮುಖ್ಯವಾದ, ವಾಸ್ತವಾಂಶಗಳನ್ನು ಮುಚ್ಚಿಡುವುದಕ್ಕೆ ಕಾರಣವಾಗಿರುತ್ತದೆ. ಈ ಮೇಲೆ ಹೇಳಿದಂತೆ, ಅಪೀಲುದಾರರು ನಡಾವಳಿಗಳನ್ನು ಹಾಗೂ ದಾಖಲೆಗಳನ್ನು ತಿಳಿದಿದ್ದಾಗ್ಯೂ, ಮಾಹಿತಿಯನ್ನು ಬಚ್ಚಿಡುವ ಕೃತ್ಯದಲ್ಲಿ ತೊಡಗಿಸಿಕೊಂಡಿರುತ್ತಾರೆ. ಹಾಗಾಗಿ, ಸತ್ಯವನ್ನು ಮುಚ್ಚುವುದು, ಸುಳ್ಳನ್ನು ಹೇಳುವುದು ರಿಟ್ ಅರ್ಜಿದಾರರ ಪಾಲಿನ ತಪ್ಪಾದ ನಡೆಯಾಗಿರುತ್ತದೆಂದು ಗಮನಿಸುವಲ್ಲಿ*

4. (2010) 6 ಕೆಎಲ್‌ಜೆ 504 (ಡಿಬಿ)

*ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರು ಸಮರ್ಥನೀಯವಾಗಿರುತ್ತಾರೆ.*

*(ಇದಕ್ಕೆ ನನ್ನಿಂದ ಒತ್ತು ನೀಡಲಾಗಿದೆ)*

11. ಸಂವಿಧಾನದ 226ನೇ ಅನುಚ್ಛೇದದ ಅಧಿಕಾರ ವ್ಯಾಪ್ತಿಯು ಅಸಾಧಾರಣವಾದುದು, ನ್ಯಾಯ ಸಮ್ಮತವಾದುದು ಹಾಗೂ ವಿವೇಚನಾಯುತ ವಾದುದಾಗಿರುತ್ತದೆ. ಅದರಲ್ಲಿ ನಮೂದಿಸಿರುವ ವಿಶೇಷಾಧಿಕಾರದ ರಿಟ್‌ಗಳನ್ನು ಗಣನೀಯ ನ್ಯಾಯ ನೀಡಿಕೆಗೆ ಸಂಬಂಧಿಸಿದಂತೆ ಹೊರಡಿಸಲಾಗಿರುತ್ತದೆ. ಹಾಗಾಗಿ, ನ್ಯಾಯಾಲಯಕ್ಕೆ ಬರುವಂಥ ಅರ್ಜಿದಾರರು, ಶುದ್ಧಹಸ್ತರಾಗಿ ಬರಬೇಕು ಹಾಗೂ, ಯಾವುದೇ ಮುಖ್ಯ ವಾಸ್ತವಾಂಶವನ್ನು ಮರೆಮಾಚದೆ ಅಥವಾ ಅಡಗಿಸಿಡದೆ ನ್ಯಾಯಾಲಯದ ಮುಂದೆ ಎಲ್ಲಾ ವಾಸ್ತವಾಂಶಗಳನ್ನು ತೆರೆದಿಡಬೇಕು. ಅವುಗಳು ಯುಕ್ತ ವಾಸ್ತವಾಂಶಗಳನ್ನು ಅವುಗಳು ಇರುವ ರೀತಿಯಲ್ಲೇ ಬಹಿರಂಗಪಡಿಸಬೇಕು ಹಾಗೂ ಅರ್ಜಿದಾರರು ನ್ಯಾಯಾಲಯವನ್ನು ತಪ್ಪುದಾರಿಗೆಳೆಯುವ ತಪ್ಪಿತಸ್ಥರಾಗಿರಬಾರದು. ಮುಖ್ಯವಾದ ವಾಸ್ತವಾಂಶಗಳನ್ನು ಮರೆಮಾಚಿರುವುದು ಅಥವಾ ಅಡಗಿಸಿಟ್ಟಿರುವುದು ಅಥವಾ ನ್ಯಾಯಾಲಯವನ್ನು ದಾರಿ ತಪ್ಪಿಸಲು ಪ್ರಯತ್ನಿಸಿರುವುದು ಕಂಡು ಬಂದಲ್ಲಿ, ಪ್ರಕರಣದ ಗುಣಾರ್ಹತೆಗಳನ್ನು ಪರಿಗಣಿಸದೆ ಅರ್ಜಿಯನ್ನು ಆರಂಭದಲ್ಲಿಯೇ ತಿರಸ್ಕರಿಸುವುದಕ್ಕೆ ತಕ್ಕುದಾಗಿರುತ್ತದೆ.

12. ಪ್ರಸ್ತುತ ಪ್ರಕರಣದಲ್ಲಿ, ಅರ್ಜಿದಾರರು ಎಲ್ಲಾ ವಾಸ್ತವಾಂಶಗಳೊಂದಿಗೆ ಬಂದಿರುವುದಿಲ್ಲ. ಅರ್ಜಿಯು ಆರಂಭದಲ್ಲಿ ಕಂಡುಬಂದಂತೆ ಹಾಗೂ ಇದರ ಮೇಲೆ ಅರ್ಜಿದಾರನು ಸಹಿ ಮಾಡಿ 28.01.2014ರಂದು ಲಭ್ಯವಾಗಿರುವಂಥ 25.01.2014ನೇ ದಿನಾಂಕದ ಆದೇಶದ ಮೇರೆಗೆ, ಪ್ರತ್ಯರ್ಜಿದಾರ ಸಂಖ್ಯೆ.2ರ ಮುಂದೆ ಇವರು ಸಲ್ಲಿಸಿದ ಅಪೀಲು ಹಾಗೂ ದಿನಾಂಕ 25.01.2014ರ ಆದೇಶದ ಮೇರೆಗೆ ತಿರಸ್ಕರಿಸಲಾಗಿರುವುದರ ನಮೂದನೆಯನ್ನು ಆತ ಆಯ್ಕೆ ಮಾಡಿಕೊಂಡಿರುವುದಿಲ್ಲ. ಖಂಡಿತವಾಗಿ, ಅರ್ಜಿದಾರನ ಕೃತ್ಯ ಮುಖ್ಯವಾದ ವಾಸ್ತವಾಂಶವನ್ನು ಮರೆಮಾಚಲು ಕಾರಣವಾಗಿದೆ.

ಮೇಲಿನದರ ಹಿನ್ನೆಲೆಯಲ್ಲಿ, ಈ ಆದೇಶದ ಪ್ರತಿಯು ಲಭ್ಯವಾದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ 25.01.2014ರಂದು ಅಪೀಲು ಪ್ರಾಧಿಕಾರವು ಹೊರಡಿಸಿದ ಆದೇಶ ಹಾಗೂ ಈ ಅರ್ಜಿಯಲ್ಲಿನ ಪ್ರಶ್ನಿತ ಆದೇಶವನ್ನು ನಿರಾಕರಿಸಲು ಅರ್ಜಿದಾರರಿಗೆ ಅವರ ಸ್ವಾತಂತ್ರ್ಯವನ್ನು ಮೀಸಲಿಟ್ಟ ಸದರಿ ಆದೇಶವನ್ನು ವಿಲೇ ಮಾಡಲಾಗಿರುತ್ತದೆ. ಅರ್ಜಿದಾರನು ಯಾವುದೇ ಮುಖ್ಯವಾದ ವಾಸ್ತವಾಂಶಗಳನ್ನು ಮರೆಮಾಚುವಂತಿಲ್ಲ ಇಲ್ಲವೆ ಯಾವುದೇ ಭವಿಷ್ಯದ ವ್ಯವಹರಣೆಗಳಲ್ಲಿ ತನಗೆ ಹೊಂದಾಣಿಕೆಯಾಗುವಂಥ ರೀತಿಯಲ್ಲಿ ವಾಸ್ತವಾಂಶಗಳನ್ನು ನಿರೂಪಿಸುವಂತಿಲ್ಲವೆಂಬುದನ್ನು ಸ್ಪಷ್ಟಪಡಿಸಲಾಗಿರುತ್ತದೆ.